ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ 18ನೇ ಅಡ್ಡ ರಸ್ತೆ, ಬೆಂಗಳೂರು-12.

ದಿನಾಂಕ 13/8/2013

## ಕ್ರೀಡಾ ಸಲಹಾ ಸಮಿತಿ ಸಭೆಯ ನಡಾವಳಿ 2013-14

ಸಭೆಯ ಆರಂಭದಲ್ಲಿ ಸಭೆಯ ಅಧ್ಯಕ್ಷರಿಗೆ ಹಾಗೂ ಕಾರ್ಯಕಾರಿ ಸಮಿತಿಯ ಸರ್ವ ಸದಸ್ಯರಿಗೆ ಜಂಟಿ ನಿರ್ದೇಶಕರಾದ ಶ್ರೀ ರವೀಂದ್ರ ಹೆಚ್ ರಿತ್ತಿರವರು ಸ್ವಾಗತ ಕೋರಿದರು.ಅನಂತರ ಕಾರ್ಯಸೂಚಿಯಂತೆ 2013-14ನೇ ಸಾಲಿನ ಕ್ರೀಡಾ ಚಟುವಟಿಕೆಗಳನ್ನು ನಡೆಸಲು ಚರ್ಚಿಸುವ ಕಾರ್ಯಕಲಾಪವನ್ನು ನಡೆಸಿಕೊಡುವಂತೆ ಮಾನ್ಯ ಅಧ್ಯಕ್ಷರಲ್ಲಿ ವಿನಂತಿಸಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಮಾನ್ಯ ನಿರ್ದೇಶಕರು ಸಭೆಯನ್ನು ಕುರಿತು ಮಾತನಾಡುತ್ತಾ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ನಡೆಸುವ ಕ್ರೀಡಾ ಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.ಸಭೆಯ ಅಜೆಂಡಾಗಳ ಬಗ್ಗೆ ಸದಸ್ಯರು ಸಭೆಯ ವಿಷಯ ಸೂಚಿಗಳನ್ನು ಒಂದೊಂದಾಗಿ ಚರ್ಚಿಸಿ ತೆಗೆದುಕೊಂಡ ತೀರ್ಮಾನಗಳು ಈ ಕೆಳಕಂಡಂತಿವೆ.

| ಕ್ರ ಸಂ | ವಿಷಯ | 2013-14ನೇ ಸಾಲಿನಲ್ಲಿ ಹಮ್ಮಿಕೊಳ್ಳಲಾಗುವ ಕ್ರೀಡಾ ಚಟುವಟಿಕೆಗಳು ಮತ್ತು ಕೈಗೊಳ್ಳಲಾದ ನಿರ್ಣಯಗಳು |
|---|---|---|
| 1 | 2012-13ನೇ ಸಾಲಿನ ಸಭಾ ನಡಾವಳಿಗಳನ್ನು ಓದಿ ದಾಖಲಿಸುವುದು. | 2012-13ನೇ ಸಾಲಿನ ಸಭಾ ನಡಾವಳಿಗಳನ್ನು ಶಾಖಾಧಿಕಾರಿಗಳು ಓದಿದ್ದನ್ನು ದಾಖಲಿಸಲಾಯಿತು. |
| 2. | 2012-13ನೇ ಸಾಲಿನ ಸಭಾ ನಡಾವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ | ಕಳೆದ ಸಾಲಿನಲ್ಲಿ ಸಭೆಯಲ್ಲಿ ಸಭಾ ನಡಾವಳಿಯ ಮೂಲಕ ತೆಗೆದುಕೊಳ್ಳಲಾದ ತೀರ್ಮಾನವನ್ನು ಯಥಾವತ್ತಾಗಿ ಜಾರಿಗೊಳಿಸಲಾಗಿದೆ. |
| 3. | 2012-13ನೇ ಸಾಲಿನ ಕ್ರೀಡಾ ವರದಿಯನ್ನು ಓದುವುದು. | 2012-13ನೇ ಸಾಲಿನ ಕ್ರೀಡಾ ವರದಿಯನ್ನು ಕ್ರೀಡಾ ಶಾಖಾಧಿಕಾರಿಗಳು ಓದಿದರು. |
| 4. | 2012-13ನೇ ಸಾಲಿನ ಕ್ರೀಡಾ ನಿಧಿ ಸಂಗ್ರಹಣೆಯನ್ನು ಸಭೆಯ ಮುಂದೆ ಮಂಡಿಸುವುದು. | 2012-13ನೇ ಸಾಲಿನ ಕ್ರೀಡಾ ನಿಧಿಯ ಲೆಕ್ಕ ತಪಾಸಣೆಯು ನಡೆಯುತ್ತಿದ್ದು, ಅದು ಇನ್ನೂ ಪೂರ್ಣಗೊಳ್ಳದ್ದರಿಂದ ಆ ಕುರಿತು ಪೂರ್ಣ ಮಾಹಿತಿಯನ್ನು ನೀಡಲು ಸಾಧ್ಯವಾಗುತ್ತಿಲ್ಲ. ಈ ಸಂಬಂಧ ಸರ್ವ ಸದಸ್ಯರುಗಳಿಗೆ ಮುಂದೆ ಮಾಹಿತಿ ನೀಡಲಾಗುವುದೆಂದು ತಿಳಿಸುತ್ತಾ ಕೆಲವು ಜಿಲ್ಲಾ ಉಪನಿರ್ದೇಶಕರುಗಳು ಜಿಲ್ಲೆಗೆ ಸಂಬಂಧಿಸಿದ ಕ್ರೀಡಾ ನಿಧಿ ಕ್ರೋಢೀಕರಣ ಹಾಗೂ ಖರ್ಚಾದ ಬಗ್ಗೆ ಮಾಹಿತಿ ನೀಡುವಂತೆ ಕೋರಿದರು. |
| 5. | 2013-14ನೇ ಸಾಲಿನಿಂದ ಹೊಸ ಕ್ರೀಡೆಗಳನ್ನು ಸೇರ್ಪಡೆ ಮಾಡುವ ಬಗ್ಗೆ | 2013-14ನೇ ಸಾಲಿನಿಂದ ಸಾಫ್ಟ್ ಟೆನ್ನಿಸ್ ಮತ್ತು ಕರಾಟೆ ಆಟಗಳನ್ನು ಹೊಸದಾಗಿ ಸೇರ್ಪಡೆ ಮಾಡಲು ಸೂಚಿಸಿದಾಗ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು. |
| 6. | ರಾಜ್ಯಮಟ್ಟದ ಕ್ರೀಡಾ ಸ್ಪರ್ಧೆಗಳನ್ನು ನಡೆಸಲು ಸ್ಥಳ ಗೊತ್ತುಪಡಿಸುವುದು. | 2013-14ನೇ ಸಾಲಿನ ರಾಜ್ಯಮಟ್ಟದ ಕ್ರೀಡೆಗಳನ್ನು ಈ ಕೆಳಕಂಡ ಜಿಲ್ಲೆಗಳಲ್ಲಿ ನಡೆಸಲು ಸಭೆ ತೀರ್ಮಾನಿಸಿತು. |

| ಕ್ರಮ ಸಂಖ್ಯೆ | ಕ್ರೀಡೆ/ಸ್ಪರ್ಧೆಯ ಹೆಸರು | 2013-14ರ ಕ್ರೀಡೆಗಳು ಮತ್ತು ಜಿಲ್ಲೆಯ ಹೆಸರು |
|---|---|---|
| 1 | ಈಜು | ಬೆಂಗಳೂರು ಉತ್ತರ |
| 2 | ಟೇಬಲ್ ಟೆನ್ನಿಸ್ | ಚಿಕ್ಕಮಗಳೂರು |

| | | |
|---|---|---|
| 3 | ವಾಲಿಬಾಲ್ | ರಾಮನಗರಂ |
| 4 | ಖೋ ಖೋ | ಉತ್ತರಕನ್ನಡ |
| 5 | ಫುಟ್ ಬಾಲ್ | ತುಮಕೂರು |
| 6 | ಕಬಡ್ಡಿ | ಮಂಡ್ಯ |
| 7 | ಬ್ಯಾಸ್ಕೆಟ್ ಬಾಲ್ | ಬಳ್ಳಾರಿ |
| 8 | ಷಟಲ್ ಬ್ಯಾಡ್ಮಿಂಟನ್ | ಹಾಸನ |
| 9 | ಹಾಕಿ | ಕೊಡಗು |
| 10 | ಥ್ರೋ ಬಾಲ್ | ಗುಲ್ಬರ್ಗಾ |
| 11 | ಟೆನಿಕಾಯ್ಟ್ | ಬೆಂಗಳೂರು ಗ್ರಾಮಾಂತರ |
| 12 | ಅಥ್ಲೆಟಿಕ್ಸ್ | ಧಾರವಾಡ |
| 13 | ನೆಟ್ ಬಾಲ್, ಜಂಪ್ ರೋಪ್ | ದಕ್ಷಿಣಕನ್ನಡ |
| 14 | ಕುಸ್ತಿ/ | ಮೈಸೂರು |
| 15 | ಚೆಸ್ | ಚಾಮರಾಜನಗರ |
| 16 | ಸೈಕ್ಲಿಂಗ್ | ಬಿಜಾಪುರ |
| 17 | ಜೂಡೋ | ದಾವಣಗೆರೆ |
| 18 | ಜಿಮ್ನಾಸ್ಟಿಕ್ | ಶಿವಮೊಗ್ಗ |
| 19 | ಯೋಗ | ಬೀದರ್ |
| 20 | ಲಾನ್ ಟೆನ್ನಿಸ್ | ಬೆಂಗಳೂರು ದಕ್ಷಿಣ |
| 21 | ಹ್ಯಾಂಡ್ ಬಾಲ್ | ಗದಗ |
| 22 | ಟೆಕ್ವಾಂಡೋ | ಹಾವೇರಿ |
| 23 | ಬಾಲ್ ಬ್ಯಾಡ್ಮಿಂಟನ್ | ಬಾಗಲಕೋಟೆ |
| 24 | ಸಾಫ್ಟ್ ಟೆನ್ನಿಸ್ | ಉಡುಪಿ |
| 25 | ಕರಾಟೆ | ಚಿಕ್ಕಬಳ್ಳಾಪುರ |

| | | |
|---|---|---|
| 7 | 2013-14ನೇ ಸಾಲಿನ ರಾಷ್ಟ್ರ ಮಟ್ಟದ ಕ್ರೀಡೆಗಳಿಗೆ ಕ್ರೀಡಾ ಉಡುಪುಗಳನ್ನು ಖರೀದಿಸಲು ಟೆಂಡರ್ ಕರೆಯುವ ಬಗ್ಗೆ | ಪ್ರತಿ ವರ್ಷದಂತೆ ಈ ವರ್ಷವೂ ಸಹ ರಾಜ್ಯಮಟ್ಟದ ವಿವಿಧ ಕ್ರೀಡೆಗಳಲ್ಲಿ ವಿಜೇತರಿಗೆ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಕ್ರೀಡಾಪಟುಗಳಿಗೆ ಸಮವಸ್ತ್ರವನ್ನು ವಿತರಿಸಲು ಕಾಯಿದೆ ಪ್ರಕಾರ ಟೆಂಡರ್ ಕರೆಯಲು ಅನುಮೋದನೆ ನೀಡಿತು. ಟೆಂಡರ್ ಪಡೆಯುವವರಿಗೆ ಸ್ಪೋರ್ಟ್ಸ್ ಕಿಟ್‌ಬ್ಯಾಗ್‌ನ್ನು ಉಚಿತವಾಗಿ ನೀಡುವಂತೆ ಕೋರುವ ಪ್ರಸ್ತಾಪವನ್ನು ಅಂಗೀಕರಿಸಲಾಯಿತು. |
| 8 | ರಾಜ್ಯಮಟ್ಟದ ಕ್ರೀಡೆಗಳನ್ನು ನಡೆಸುವ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಸಂಭಾವನೆ ನೀಡುವ ಬಗ್ಗೆ | 2013-14ನೇ ಸಾಲಿನಲ್ಲಿ ರಾಜ್ಯಮಟ್ಟದ ಕ್ರೀಡೆಗಳನ್ನು ನಡೆಸುವ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಛೇರಿಗಳಿಗೆ ರೂ 5000/- ಗಳಷ್ಟು ಸಂಭಾವನೆಯನ್ನು ನೀಡಬಹುದೆಂದು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು. |
| 9 | ರಾಜ್ಯಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸುವವರಿಗೆ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಗಳನ್ನು ಪರಿಷ್ಕರಿಸುವ ಬಗ್ಗೆ | ಇದುವರೆವಿಗೂ ಇರುವ ರೂ 80/- ಗಳನ್ನು ರೂ 100/- ಗಳಿಗೆ ದಿನಭತ್ಯೆಯನ್ನು ಹೆಚ್ಚಿಸುವಂತೆ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |

| | | |
|---|---|---|
| 10 | ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ನಗದು ಬಹುಮಾನವನ್ನು ನೀಡುವ ಬಗ್ಗೆ | ರಾಷ್ಟ್ರಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ಪ್ರಶಸ್ತಿಯ ಜೊತೆಗೆ ನಗದು ಬಹುಮಾನವನ್ನು ನೀಡುವ ಬಗ್ಗೆ ಹಾಲಿ ಚಾಲ್ತಿಯಲ್ಲಿರುವ ವಿಧಾನವನ್ನೇ ಮುಂದುವರೆಸುವಂತೆ ತೀರ್ಮಾನಿಸಲಾಯಿತು. |
| 11 | ಕ್ರೀಡಾ ಅಭಿವೃದ್ಧಿ ಚಟುವಟಿಕೆಗಳಿಗಾಗಿ ಕ್ರೀಡಾನಿಧಿಯನ್ನು ಬಳಕೆ ಮಾಡುವ ಬಗ್ಗೆ | 2013–14ನೇ ಸಾಲಿಗೆ ಸಂಬಂಧಿಸಿದಂತೆ ಒಟ್ಟು ಲಭ್ಯವಿರುವ ಕ್ರೀಡಾ ನಿಧಿಯನ್ನು ಅಮೂಲಾಗ್ರವಾಗಿ ಲೆಕ್ಕ ಮಾಡಿ ಅದನ್ನು ಯಾವುದಕ್ಕೆ ಬಳಕೆ ಮಾಡಬೇಕೆಂದು ಮುಂದೆ ನಡೆಯುವ ಸಭೆಗಳಲ್ಲಿ ಚಿಂತಿಸುವಂತೆ ನಿರ್ಧರಿಸಲಾಯಿತು. |
| 12 | 2013–14ನೇ ಸಾಲಿನಿಂದ ರಾಜ್ಯಮಟ್ಟದ ಕ್ರೀಡಾ ಸ್ಪರ್ಧೆಗಳ ಉಸ್ತುವಾರಿಗಾಗಿ ಇಲಾಖೆಯ ಅಧಿಕಾರಿಗಳನ್ನು ನಿಯೋಜಿಸುವ ಕುರಿತು | 2013–14ನೇ ಸಾಲಿನಿಂದ ರಾಜ್ಯಮಟ್ಟದ ಕ್ರೀಡಾಸ್ಪರ್ಧೆಗಳ ಬಗ್ಗೆ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಉಂಟಾಗುತ್ತಿದ್ದ ಸಮಸ್ಯೆಗಳು ಹಾಗೂ ಇತರೆ ತೊಂದರೆಗಳನ್ನು ನಿವಾರಿಸುವ ಉದ್ದೇಶದಿಂದ ಇಲಾಖೆಯ ಅಧಿಕಾರಿಗಳನ್ನು ರಾಜ್ಯಮಟ್ಟದ ಕ್ರೀಡೆಗಳಿಗೆ ನಿಯೋಜಿಸುವಂತೆ ಸರ್ವಾನುಮತದಿಂದ ಸಭೆಯು ತೀರ್ಮಾನಿಸಿತು. |
| 13 | 2013–14ನೇ ಸಾಲಿನಿಂದ ರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸುವ ತಂಡಗಳಿಗೆ ಇಲಾಖೆ ಅಧಿಕಾರಿಯನ್ನು ತಂಡದ ವ್ಯವಸ್ಥಾಪಕರಾಗಿ ನಿಯೋಜಿಸುವ ಬಗ್ಗೆ | 2013–14ನೇ ಸಾಲಿನಿಂದ ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳ ಹಿತದೃಷ್ಟಿಯಿಂದ ಇಲಾಖೆಯ ಅಧಿಕಾರಿಗಳನ್ನು ತಂಡದ ವ್ಯವಸ್ಥಾಪಕರಾಗಿ (ಮೇಲಧಿಕಾರಿಗಳಾಗಿ) ನಿಯೋಜಿಸುವಂತೆ ಸಭೆಯು ಒಪ್ಪಿಗೆ ನೀಡಿತು. ವ್ಯವಸ್ಥಾಪಕರನ್ನು ಸೂಚಿಸಲು ನಿರ್ದೇಶಕರು ಹಾಗೂ ಜಂಟಿ ನಿರ್ದೇಶಕರು (ಆಡಳಿತ) ಇವರಿಗೆ ಸಭೆ ಅಧಿಕಾರ ನೀಡಲಾಯಿತು. |
| 14 | ಕ್ರೀಡಾ ಕೋಚ್ ಗಳಿಗೆ ಸಂಬಂಧಪಟ್ಟ ಪ್ರಾಚಾರ್ಯರು ಮತ್ತು ಜಿಲ್ಲಾ ಉಪನಿರ್ದೇಶಕರುಗಳಿಂದ ಮೇಲುಸಹಿ ಮಾಡಿರುವ ಗುರುತಿನ ಪತ್ರ ನೀಡುವ ಬಗ್ಗೆ | 2013–14ನೇ ಸಾಲಿನಿಂದ ಪಪೂಶಿ ಇಲಾಖೆಯಿಂದ ನಡೆಸುವ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವ ಕೋಚ್‌ಗಳಿಗೆ ಸಂಬಂಧಪಟ್ಟ ಪ್ರಾಚಾರ್ಯರು ಮತ್ತು ಆಯಾ ಜಿಲ್ಲಾ ಉಪನಿರ್ದೇಶಕರುಗಳು ಮೇಲು ಸಹಿ ಮಾಡಿ ಗುರುತಿನ ಪತ್ರ ನೀಡುವಂತೆ ಸಭೆಯು ನಿರ್ಣಯಿಸಿತು. ಸಕಾಲದಲ್ಲಿ ಜಿಲ್ಲಾ ಉಪನಿರ್ದೇಶಕರು ಕೋಚ್‌ಗಳಿಗೆ ಗುರುತಿನ ಪತ್ರ ನೀಡಿ ಕಳುಹಿಸದಿದ್ದಲ್ಲಿ ಇಲಾಖೆಯ ನಿರ್ದೇಶಕರು ಹಾಗೂ ಸಹ ನಿರ್ದೇಶಕರು(ಆಡಳಿತ) ಇವರುಗಳು ಕೋಚ್‌ಗಳನ್ನು ಸೂಚಿಸಿ ಕಳುಹಿಸಲು ಸಭೆಯು ಅಧಿಕಾರ ನೀಡಿತು. |
| 15 | ಅಧ್ಯಕ್ಷರ ಒಪ್ಪಿಗೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು | ಮಾನ್ಯ ನಿರ್ದೇಶಕರ ಅಭಿಪ್ರಾಯದನ್ವಯ ಕ್ರೀಡಾ ಉಪಸಮಿತಿಯನ್ನು ರಚಿಸಲಾಯಿತು. ಅದರಲ್ಲಿರಬೇಕಾದ ಸದಸ್ಯರ ಬಗ್ಗೆ ಈ ಕೆಳಕಂಡಂತೆ ತೀರ್ಮಾನಿಸಲಾಯಿತು.<br>1. ಜಂಟಿ ನಿರ್ದೇಶಕರು (ಆಡಳಿತ)<br>2. ಜಂಟಿ ನಿರ್ದೇಶಕರು (ಶೈಕ್ಷಣಿಕ) |

| | | |
|---|---|---|
| | | 3. ಸಹಾಯಕ ನಿರ್ದೇಶಕರು (ಲೆಕ್ಕ ಶಾಖೆ)<br>4. ಉಪನಿರ್ದೇಶಕರು – ಶ್ರೀ ಲಿಂಗರಾಜು, ರಾಮನಗರ ಜಿಲ್ಲೆ<br>5. ಶಾಖಾಧಿಕಾರಿಗಳು – ಕ್ರೀಡಾ ಶಾಖೆ<br>6. ದೈಹಿಕ ನಿರ್ದೇಶಕರು – ಸದಸ್ಯರು<br>1.ಶ್ರೀ ಸಣ್ಣಪ್ಪ ,ದೈ .ನಿ .ಬೆಂಗಳೂರು<br>2.ಶ್ರೀ ಬಸವರಾಜು, ದೈ ನಿ , ತುಮಕೂರು |

## ಕ್ರೀಡಾ ಉಪಸಮಿತಿಯ ನಡಾವಳಿಗಳು 2013–14

| | | |
|---|---|---|
| 1 | ಅನುಪಯುಕ್ತ ಕ್ರೀಡಾ ಸಾಮಗ್ರಿಗಳನ್ನು ವಿಲೇವಾರಿ ಮಾಡುವ ಬಗ್ಗೆ | ಅನುಪಯುಕ್ತವಾದ ಕ್ರೀಡಾ ವಸ್ತುಗಳನ್ನು ಮತ್ತು ದಾಸ್ತಾನುಗಳನ್ನು ವಿಲೇವಾರಿ ಅಥವಾ ಕೈಬಿಡುವ ನಿಟ್ಟಿನಲ್ಲಿ ಇಲಾಖಾ ನಿರ್ದೇಶನಾಲಯದಿಂದ ಒಂದು ಸ್ಪಷ್ಟ ಆದೇಶ ನೀಡಲು ಕ್ರಮ ವಹಿಸಬೇಕೆಂದು ಸಭೆಯು ನಿರ್ಣಯಿಸಿತು. |
| 2 | ಹೆಚ್ಚು ಕಾಲೇಜುಗಳಿರುವ ಜಿಲ್ಲೆಗಳಲ್ಲಿ ಕ್ರೀಡೆಗಳನ್ನು ವಲಯವಾರು ನಡೆಸುವ ಕುರಿತು ಅನುಮತಿ ಬಗ್ಗೆ | ಅಧಿಕ ಸಂಖ್ಯೆ ಕಾಲೇಜುಗಳಿರುವ ಜಿಲ್ಲೆಗಳಲ್ಲಿ ಒಮ್ಮೆಲೇ ಪಂದ್ಯಾಟಗಳನ್ನು ನಡೆಸಲು ಕಷ್ಟವಾಗುವುದರಿಂದ (ಬೆಂಗಳೂರು ಉತ್ತರ ಜಿಲ್ಲೆ) ಅಂತಹ ಜಿಲ್ಲೆಗಳಲ್ಲಿ ರೇಂಜ್ (ವಲಯವಾರು) ವಾರು ಕ್ರೀಡೆಗಳನ್ನು ನಿರ್ವಹಿಸುವಂತೆ ಸಭೆಯು ಒಮ್ಮತದಿಂದ ಅನುಮೋದಿಸಿತು. |
| 3 | ಕ್ರೀಡಾಕೂಟ ನಡೆಸುವ ಸಂದರ್ಭದಲ್ಲಿ ತಾಂತ್ರಿಕ ಮಾಹಿತಿಯನ್ನು ಸಂಬಂಧಿಸಿದ ದೈಹಿಕ ಉಪನ್ಯಾಸಕರಿಂದ ಪಡೆಯುವ ಬಗ್ಗೆ | 2013–14ನೇ ಸಾಲಿನಿಂದ ಕ್ರೀಡಾ ಚಟುವಟಿಕೆಗಳ ಬಗ್ಗೆ ಸುತ್ತೋಲೆ ಹಾಗೂ ಕಾರ್ಯಕ್ರಮಗಳನ್ನು ರೂಪಿಸುವ ಸಂದರ್ಭದಲ್ಲಿ ಕ್ರೀಡಾ ಪರಿಜ್ಞಾನ ಹೊಂದಿರುವ ದೈಹಿಕ ಉಪನ್ಯಾಸಕರೊಂದಿಗೆ ಸಮಾಲೋಚಿಸಿ ತಾಂತ್ರಿಕ ಮಾಹಿತಿಯನ್ನು ಪಡೆದುಕೊಂಡು ಸ್ಪಷ್ಟವಾದ ಸ್ಪೆಸಿಫಿಕೇಷನ್‌ನ್ನು ಸೂಚಿಸುವಂತೆ ಸಭೆಯು ತೀರ್ಮಾನಿಸಿತು. |
| 4 | ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯಮಟ್ಟದ ಕ್ರೀಡೆಗಳನ್ನು ನಡೆಸಲು ನಿರ್ವಹಣೆಗಾಗಿ ಇಲಾಖೆ ಬಿಡುಗಡೆ ಮಾಡುವ ಅನುದಾನವನ್ನು ಹೆಚ್ಚಿಸುವ ಕುರಿತು | ಕಳೆದ 9 ವರ್ಷದಿಂದಲೂ ಇಲಾಖೆಯು ನಡೆಸುವ ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯಮಟ್ಟದ ಕ್ರೀಡೆಗಳನ್ನು ನಡೆಸಲು ಇಲಾಖೆಯು ಭರಿಸುತ್ತಿದ್ದ ಅನುದಾನದಲ್ಲಿ ಕ್ರೀಡೆಗಳನ್ನು ನಡೆಸಲು ಕಷ್ಟವಾಗುತ್ತಿದ್ದು ಅದನ್ನು ಈ ಕೆಳಕಂಡಂತೆ ಪರಿಷ್ಕರಿಸಲು ಸಭೆಯು ನಿರ್ಣಯ ಕೈಗೊಂಡಿತು.<br>ತಾಲ್ಲೂಕುಮಟ್ಟದ ಕ್ರೀಡೆ ರೂ 10,000/– ದಿಂದ ರೂ 20,000/– ಜಿಲ್ಲಾಮಟ್ಟದ ಕ್ರೀಡೆ ರೂ 25,000/– ದಿಂದ ರೂ 40,000/– ಜಿಲ್ಲಾಮಟ್ಟದ ಕ್ರೀಡೆಗಳಿಗೆ ಪದಕ, ಪ್ರಶಸ್ತಿ ಪತ್ರ ಹಾಗೂ ಟ್ರೋಫಿಗಳ ಖರೀದಿಗೆ ಈವರೆವಿಗೂ ನೀಡುತ್ತಿದ್ದ ರೂ 9,000/– ಗಳನ್ನು 10,000/– ಗಳಿಗೆ ಹೆಚ್ಚಿಸಲು ಸಭೆಯು ತೀರ್ಮಾನಿಸಿತು. ರಾಜ್ಯಮಟ್ಟದ ಕ್ರೀಡೆ |

| | | |
|---|---|---|
| 5 | | ಇದುವರೆವಿಗೂ ರೂ, 30,000/- ಇತ್ತು. ಅದನ್ನು ಕ್ರೀಡೆ ದೊಡ್ಡದಾಗಿದ್ದರೆ, ರೂ 60,000/- ಗಳಿಗೆ, ಕ್ರೀಡೆ ಚಿಕ್ಕದಾಗಿದ್ದರೆ, ರೂ 40,000/- ಗಳಿಗೆ ಹೆಚ್ಚಿಸಲಾಯಿತು. |
| 5 | ಅಥ್ಲೆಟಿಕ್ಸ್‌ಗೆ ನೀಡುತ್ತಿರುವ ಸಂಘಟನಾ ವೆಚ್ಚವನ್ನು ಹೆಚ್ಚಿಸುವ ಕುರಿತು | 2013-14ನೇ ಸಾಲಿನಿಂದ ನಡೆಯುವ ಅಥ್ಲೆಟಿಕ್ಸ ಕೂಟಗಳಿಗೆ ಇದುವರೆವಿಗೂ ನೀಡುತ್ತಿರುವ ಸಂಘಟನಾ ವೆಚ್ಚವು ರೂ 75,000/- ಗಳಾಗಿದ್ದು ನಿರ್ವಹಿಸಲು ಕಷ್ಟವಾಗುತ್ತಿರುವುದರಿಂದ ಅದನ್ನು ರೂ 1,25,000/- ಗಳಿಗೆ ಹೆಚ್ಚಿಸಲು ಸಭೆಯು ಅನುಮೋದಿಸಿತು. |
| 6 | ರಾಜ್ಯಮಟ್ಟದ ಅಥ್ಲೆಟಿಕ್ಸ್‌ಗಳನ್ನು ನಡೆಸುವ ಕ್ರೀಡಾಧಿಕಾರಿಗಳಿಗೆ ಸಂಭಾವನೆ ಹೆಚ್ಚಿಸುವ ಕುರಿತು | 2013-14ನೇ ಸಾಲಿನಿಂದ ರಾಜ್ಯಮಟ್ಟದ ಅಥ್ಲೆಟಿಕ್ಸಗಳನ್ನು ನಡೆಸುವ ಕ್ರೀಡಾಧಿಕಾರಿಗಳಿಗೆ ಇದುವರೆವಿಗೂ ರೂ 10,000/- ಗಳ ಸಂಭಾವನೆಯನ್ನು ನೀಡಲಾಗುತ್ತಿದ್ದು ಅದನ್ನು ರೂ 20,000/-ಗಳಿಗೆ ಹೆಚ್ಚಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 7 | ರಾಜ್ಯಮಟ್ಟದ ಕ್ರೀಡಾಕೂಟದ ಬಹುಮಾನಕ್ಕಾಗಿ ನೀಡುತ್ತಿದ್ದ ಅನುದಾನವನ್ನು ಹೆಚ್ಚಿಸುವ ಬಗ್ಗೆ | ಈ ಹಿಂದೆ ರಾಜ್ಯಮಟ್ಟದ ಕ್ರೀಡಾಕೂಟದ ಬಹುಮಾನಕ್ಕಾಗಿ ರೂ 1,600/- ಗಳನ್ನು ನೀಡಲಾಗುತ್ತಿದ್ದು 2013-14ನೇ ಸಾಲಿನಿಂದ ಅದನ್ನು ರೂ 5,000/- ಗಳಿಗೆ ಹೆಚ್ಚಿಸಲು ಸಭೆಯು ತೀರ್ಮಾನಿಸಿತು. |
| 8 | ಕ್ರೀಡೆಗಳಲ್ಲಿ ಭಾಗವಹಿಸುವವರಿಗೆ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆಗಳನ್ನು ಹೆಚ್ಚಿಸುವ ಕುರಿತು | 1. 2013-14ನೇ ಸಾಲಿನಿಂದ ಕ್ರೀಡೆಗಳಲ್ಲಿ ಭಾಗವಹಿಸುವವರಿಗೆ ಪ್ರಯಾಣ ದರವನ್ನು 1 ಕಿ ಮೀ ಗೆ ರೂ 1/- ರಂತೆ ನೀಡಲು ಹಾಗೂ ಒಂದು ಕಡೆಯ ಪ್ರಯಾಣವು 6 ಗಂಟೆಗಳ ಅವಧಿಯನ್ನು ಮೀರಿದರೆ 1 ದಿನದ ಹೆಚ್ಚುವರಿ ದಿನಭತ್ಯೆಯನ್ನು ನೀಡಲು ಸಭೆಯು ಒಪ್ಪಿಗೆ ನೀಡಿತು.<br>2. ರಾಜ್ಯಮಟ್ಟದ ಕ್ರೀಡಾಕೂಟಗಳಿಗೆ ಭಾಗವಹಿಸುವ ಕ್ರೀಡಾಪಟುಗಳಿಗೆ ಅವರವರ ಸ್ಥಳದಿಂದ ಜಿಲ್ಲಾಕೇಂದ್ರಕ್ಕೆ ಪ್ರಯಾಣಿಸಲು ಅವರವರ ಕಾಲೇಜಿನ ಸಂಚಿತ ನಿಧಿಯಿಂದ ಭರಿಸಲು ಪ್ರಾಂಶುಪಾಲರುಗಳಿಗೆ ಇಲಾಖೆಯು ನಿರ್ದೇಶನ ನೀಡುವಂತೆ ಸಭೆಯು ಒಮ್ಮತದಿಂದ ತೀರ್ಮಾನಿಸಿತು. |
| 9 | ರಾಜ್ಯ ಮತ್ತು ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸುವ ಕೋಚ್‌ಗಳು, ಕ್ರೀಡಾಪಟುಗಳು ಹಾಗೂ ಮೇಲ್ವಿಚಾರಕರಿಗೆ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆಗಳನ್ನು ಹೆಚ್ಚಿಸುವ ಕುರಿತು | 2013-14ನೇ ಸಾಲಿನಿಂದ ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಈಗ ನೀಡುತ್ತಿರುವ ರೂ 225/- ಗಳಿಂದ ರೂ 250/- ಗಳಿಗೆ ಹಾಗೂ ಕೋಚ್ ಮತ್ತು ತಂಡದ ಮೇಲ್ವಿಚಾರಕರಿಗೆ ಈಗ ನೀಡುತ್ತಿರುವ ರೂ 250/- ರಿಂದ ರೂ 275/- ಗಳಿಗೆ ಹೆಚ್ಚಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. |

| | | |
|---|---|---|
| 10 | **ರಾಜ್ಯಮಟ್ಟದ ಕ್ರೀಡೆಗಳಿಗೆ ಬರುವ ಕೋಚ್‌ಗಳು ಹಾಗೂ ತಂಡದ ಮೇಲ್ವಿಚಾರಕರಿಗೆ ದಿನಭತ್ಯೆ ಪರಿಷ್ಕರಿಸುವ ಬಗ್ಗೆ** | 2013–14ನೇ ಸಾಲಿನಿಂದ ರಾಜ್ಯಮಟ್ಟದ ಕ್ರೀಡೆಗಳಿಗೆ ಬರುವ ಕೋಚ್‌ಗಳು ಹಾಗೂ ತಂಡದ ಮೇಲ್ವಿಚಾರಕರಿಗೆ ಈಗ ನೀಡುತ್ತಿರುವ ದಿನಭತ್ಯೆ ರೂ 100/– ರಿಂದ 150/– ರೂ ಗಳಿಗೆ ಹೆಚ್ಚಿಸಲು ಸಭೆಯು ಅನುಮೋದನೆ ನೀಡಿತು. |

ಅಂತಿಮವಾಗಿ ಕ್ರೀಡಾ ಶಾಖೆಯ ಶಾಖಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಿ ಯಶಸ್ಸಿಗೆ ಕಾರಣವಾದ ಸರ್ವ ಸದಸ್ಯಸರಿಗೂ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯ ಗೊಳಿಸಿದರು.

**ನಿರ್ದೇಶಕರು**

**ಪದವಿ ಪೂರ್ವ ಶಿಕ್ಷಣ ಇಲಾಖೆ**